## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/32/2015-16 ದಿ:17-06-2016

| ವಾದಿಗಳು | ವಿರುದ್ಧ | ಪ್ರತಿವಾದಿಗಳು |
|---|---|---|
| ಹುಸೇನಪ್ಪ ತಂದೆ ಲೇಟ್ ಮುದುಕಪ್ಪ<br>ಅಗಸನೂರು ಗ್ರಾಮ.<br>ಸಿರುಗುಪ್ಪ ತಾಲೂಕು. | | 1.ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ.<br>2.ಮೈನರ್ ರಮಾದೇವಿ ತಂದೆ ಲೇಟ್ ಅಯ್ಯಪ್ಪ ಮೈ/ಗಾ ತಾಯಿ ಸಿದ್ದಲಿಂಗಮ್ಮ, ಅಗಸನೂರು. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಅಗಸನೂರು | 316/3 | 0-93 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ. 316/3 ವಿ:0-93 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಅಯ್ಯಪ್ಪ ತಂದೆ ಲೇಟ್ ಮುದುಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರು ದಿನಾಂಕ:02-10-2006 ರಂದು ಮರಣ ಹೊಂದಿರುವ ಮೇರೆಗೆ ವಾರಸು ಪತ್ನಿ ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ ಮತ್ತು ಮಗಳಾದ ಮೈನರ್ ರಮಾದೇವಿ ತಂದೆ ಲೇಟ್ ಅಯ್ಯಪ್ಪ ಮೈ/ಗಾ ತಾಯಿ ಸಿದ್ದಲಿಂಗಮ್ಮ ಹೆಸರಿಗೆ ಪೋತಿವಾರಸು ಮೇರೆಗೆ ಜಂಟಿಯಾಗಿ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಅಗಸನೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಯ ಮುಂಚೆ ಹುಸೇನಪ್ಪ ತಂದೆ ಲೇಟ್ ಮುದುಕಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:23-05-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ: 86/2014-15 ದಿನಾಂಕ:16-06-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:28-03-2016 ರಿಂದ ದಿ:16-05-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ಅರ್ಜಿದಾರರ ವಾದ ಆಲಿಸಲಾಗಿ, ದಾವಾ ಜಮೀನು ಅರ್ಜಿದಾರಳ ಗಂಡನ ಹೆಸರಿಗೆ ಪಟ್ಟಾ ಇರುತ್ತದೆ. ಹಾಲಿ ಪಟ್ಟಾದಾರನಿಗೆ ಪತ್ನಿ ಸಿದ್ದಲಿಂಗಮ್ಮ ಮತ್ತು ಮೈನರ್ ಮಗಳು ರಮಾದೇವಿ ಇದ್ದು, ಪಟ್ಟಾದಾರರಾದ ಅಯ್ಯಪ್ಪ ಇವರು ದಿನಾಂಕ:02-10-2006 ರಂದು ಮರಣ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

(38)

ಹೊಂದಿದ್ದು, ಪೋತಿವಾರಸು ಮೇರೆಗೆ ತಮ್ಮಗಳ ಹೆಸರಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಅದೇರೀತಿ ವಾದಿ ಹುಸೇನಪ್ಪ ಇವರು ವಾಸ್ತವವಾಗಿ ಅಗಸನೂರು ಗ್ರಾಮ ಸ,ನಂ.135 ವಿ:3-15 ಎಕ್ರೆ ಜಮೀನಿನ ಹಕ್ಕು ಬದಲಾವಣೆಗೆ ತನ್ನ ತಕರಾರು ಇದ್ದು, ಸದ್ರಿ ಸ,ನಂ.316/3 ವಿ:0-93 ಎಕ್ರೆಗೆ ತನ್ನ ಯಾವ ತಕರಾರು ಇರುವುದಿಲ್ಲವೆಂದು, ಪೋತಿವಾರಸು ಮೇರೆಗೆ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು ವಿಚಾರಣೆ ಸಮಯದಲ್ಲಿ ದಿ:16-05-2016 ರಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ಈ ಕುರಿತು ಪರಿಶೀಲಿಸಲಾಗಿ, ಅಗಸನೂರು ಗ್ರಾಮ ಸ,ನಂ.135 ವಿ:3-15 ಎಕ್ರೆ ಜಮೀನಿಗೆ ಸಂಭಂದಿಸಿ ಈಗಾಗಲೇ ಈ ನ್ಯಾಯಾಲಯ ಪ್ರಕರಣ ಸಂ:ಕಂ:ಹಬ:ವಿವಾದ:23/2015-16 ದಿನಾಂಕ:25-05-2016 ರ ಪ್ರಕಾರ ಪ್ರಕರಣವು ಸಿವಿಲ್ ಸ್ವರೂಪವಿದ್ದು, ಸಕ್ಷಮ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಉಭಯತರಿಗೂ ಸೂಚಿಸಿ ಪ್ರಕರಣ ವಿಲೇಗೊಳಿಸಲಾಗಿದೆ.

ಆದ್ದರಿಂದ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮ ಸ,ನಂ.316/3 ವಿ:0-93 ಸೆಂಟ್ಸ್ ಜಮೀನಿಗೆ ಸಂಭಂದಿಸಿ ತಕರಾರು ವಾಪಾಸು ಪಡೆದ ಪ್ರಯಕ್ತ ಹಾಗೂ ಸದ್ರಿ ಹಕ್ಕು ಬದಲಾವಣೆಗೆ ಪ್ರಸ್ತುತ ಯಾವ ಆಕ್ಷೇಪಣೆಗಳು ಇಲ್ಲದ ಕಾರಣ, ಅರ್ಜಿದಾರರ ಹೆಸರಿಗೆ ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/32/2015-16** **ದಿ:17-06-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ. 316/3 ವಿ:0-93 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಅಯ್ಯಪ್ಪ ತಂದೆ ಲೇಟ್ ಮುದುಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರು ದಿನಾಂಕ:02-10-2006 ರಂದು ಮರಣ ಹೊಂದಿರುವ ಮೇರೆಗೆ, ವಾರಸು ಪತ್ನಿ **1.ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ** ಮತ್ತು ಮಗಳಾದ **2.ಮೈನರ್ ರಮಾದೇವಿ ತಂದೆ ಲೇಟ್ ಅಯ್ಯಪ್ಪ ಮೈ/ಗಾ ತಾಯಿ** ಸಿದ್ದಲಿಂಗಮ್ಮ ಹೆಸರಿಗೆ ಜಂಟಿಯಾಗಿ ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:17-06-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M. [signature]
**ತಹಶೀಲ್ದಾರರು,ಸಿರುಗುಪ್ಪ**

(ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರರವರ ನ್ಯಾಯಾಲಯ)

ಗೆ,
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ 3.ಕಛೇರಿ ಕಡತಕ್ಕೆ